ಚಾಸಾ-1, ಪ್ರಾಸಾಃ1

# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ

ಸಿ.ಸಿ.ನಂಃ 12283/2014

| | |
|---|---|
| ಸಾಕ್ಷಿದಾರರ ಹೆಸರು | ಶಾಂತಿ |
| ಗಂಡನ ಹೆಸರು | ಸುಬ್ರಮಣಿ |
| ವಯಸ್ಸು | 50 ವರ್ಷ |
| ಉದ್ಯೋಗ | ಮನೆಕೆಲಸ |
| ವಾಸ | ರಾಗಿಗುಡ್ಡ ಕ್ವಾಟ್ರಸ್, ಬೆಂಗಳೂರು |

**ದಿನಾಂಕಃ 25-10-2024 ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯವಿಚಾರಣೆ ದಂ.ಸಂ.ಪ್ರ. ಕಲಂ 299 ರಡಿಯಲ್ಲಿ ಹಿರಿಯ ಸಸ ಅ ಅವರಿಂದಃ**

1. ಸುಮಾರು 14-15 ವರ್ಷಗಳ ಹಿಂದೆ ನಾನು ಜಯನಗರದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆ.
2. ಚಾಸಾ-2 ಮತ್ತು 3 ರವರು ನಮ್ಮ ಮನೆಯ ಹತ್ತಿರದ ನಿವಾಸಿಗಳಾಗಿರುತ್ತಾರೆ. ಸುಮಾರು 14 ವರ್ಷಗಳ ಹಿಂದೆ ನನ್ನ ಬಳಿ ಇದ್ದ ಒಡವೆಗಳನ್ನು ಒಂದು ಬಾಕ್ಸ್ ನಲ್ಲಿ ಹಾಕಿ ಅದನ್ನು ಬೀರುನಲ್ಲಿ ಇಟ್ಟು, ಮನೆಗೆ ಬೀಗ ಹಾಕಿಕೊಂಡು ನಾನು ಕೆಲಸಕ್ಕೆ ಹೋಗಿದ್ದೆ. ನನ್ನ ಮಕ್ಕಳಿಗೆ ರಜೆ ಇದುದ್ದರಿಂದ ಅವರು ತಮಿಳುನಾಡಿಗೆ ಹೋಗಿದ್ದರು.
3. ನಾನು ರಾತ್ರಿ ಸಮಯದಲ್ಲಿ ಮನೆಕೆಲಸ ಮುಗಿಸಿಕೊಂಡು ಬಂದಾಗ ಮನೆಯ ಬೀಗ ಮುರಿದಿತ್ತು. ಮನೆಯ ಒಳಗೆ ಹೋಗಿ ನೋಡಿದಾಗ ಮನೆಯ

ಸಾಮಾನುಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ನಾನು ಬಂಗಾರದ ಆಭರಣವನ್ನು ಇಟ್ಟಿದ್ದ ಬೀರುವಿನ ಬೀಗವನ್ನೂ ಸಹ ಮುರಿದಿದ್ದರು. ಸದರಿ ಬೀರುವಿನಲ್ಲಿ ಇಟ್ಟಿದ್ದ ಬಂಗಾರದ ಆಭರಣಗಳನ್ನು ಇಟ್ಟಿದ್ದ ಬಾಕ್ಸ್ ಸಹಿತ ಯಾರೊ ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ.

4. ಕಳುವಾದ ಬಂಗಾರದ ಆಭರಣಗಳಲ್ಲಿ ಐದು ಜೊತೆ ಚಿನ್ನದ ಕಿವಿ ಓಲೆಗಳು, ಮೂರು ಬೆಳ್ಳಿಯ ಕಾಲುಚೈನುಗಳು, ಮೂರು ಚಿಕ್ಕ ಚಿನ್ನದ ಚೈನುಗಳು ಇದ್ದವು. ಸದರಿ ಆಭರಣಗಳ ನಿಖರವಾದ ತೂಕ ನನಗೆ ಮರೆತುಹೋಗಿರುತ್ತದೆ. ಅದೇ ದಿನ ಪೊಲೀಸ್ ಠಾಣೆಗೆ ಹೋಗಿ ನಾನು ದೂರು ನೀಡಿರುತ್ತೇನೆ. ದೂರು ನೀಡಿದ ದಿನವೇ ಪೊಲೀಸರು ನಮ್ಮ ಮನೆಗೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಕ್ರಮಜರುಗಿಸಿರುತ್ತಾರೆ.

5. ಸಾಕ್ಷಿಯು ದೂರು ಮತ್ತು ದೂರಿನ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ದೂರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.**

6. ಸಾಕ್ಷಿಯು ಪಂಚನಾಮೆ ನೋಡಿ ಅದರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ಪಂಚನಾಮೆ ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.**

7. ಸುಮಾರು 3 ವರ್ಷಗಳ ನಂತರ ಪೊಲೀಸರು ಕಳವಾಗಿದ್ದ ನನ್ನ ಆಭರಣಗಳು ಸಿಕ್ಕಿವೆ ಎಂದು ತಿಳಿಸಿದರು. ನಾನು ನನ್ನ ಬಂಗಾರದ ಆಭರಣಗಳನ್ನು ಪೊಲೀಸ್ ಠಾಣೆಗೆ ಹೋಗಿ, ನೋಡಿ ಗುರುತಿಸಿರುತ್ತೇನೆ. ನನ್ನ ಒಡವೆಗಳನ್ನು ಪೊಲೀಸರಿಂದ ಬಿಡಿಸಿಕೊಂಡಿರುತ್ತೇನೆ. ಆ ಸಮಯದಲ್ಲಿ ಪೊಲೀಸರು ನನ್ನ ಆಭರಣ ಕಳ್ಳತನ ಮಾಡಿದ್ದ ಆರೋಪಿಯನ್ನು ನನಗೆ ತೋರಿಸಿಲ್ಲ.

8. ಸಾಕ್ಷಿಯು ಫೋಟೊ ನೋಡಿ ಅದರಲ್ಲಿ ನಾನೇ ಬಂಗಾರದ ಆಭರಣವನ್ನು ಪಡೆಯುತ್ತಿದ್ದೇನೆ ಎಂದು ಗುರುತಿಸಿದ್ದಾರೆ. **ಆದ್ದರಿಂದ ಸದರಿ ಫೋಟೊ ನಿಪಿ-4 ಎಂದು ಗುರುತಿಸಲಾಯಿತು.**

**9.** ಪೊಲೀಸರ ಸಮಕ್ಷಮ ನಾನು ಆರೋಪಿ ನೋಡಿ ಗುರುತಿಸಿದ ಬಗ್ಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

(**ಈ ಹಂತದಲ್ಲಿ ಹಿ.ಸ.ಸ.ಅ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.**)

**ಪಾಟೀಸವಾಲು ಹಿ.ಸ.ಸ.ಅ ರವರಿಂದಃ-**

**10.** ದಿನಾಂಕಃ 26-08-2013 ರಂದು ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆಸಿದ್ದಾಗ ಸುನೀಲ್ ಕುಮಾರ್ ಎಂಬ ವ್ಯಕ್ತಿಯನ್ನು ತೋರಿಸಿ ಇತನೆ ನಮ್ಮ ಮನೆಯಲ್ಲಿ ಬಂಗಾರದ ಆಭರಣವನ್ನು ಕಳ್ಳತನ ಮಾಡಿದ್ದನು ಎಂದು

ತಿಳಿಸಿದರು ಎಂದರೆ ಸರಿಯಲ್ಲ. ಅದರ ಬಗ್ಗೆ ನಾನು ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

11. **ಸಾಕ್ಷಿಯ ಮರುಹೇಳಿಕೆಯ ಸಂಬಂಧಪಟ್ಟ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ರಂಗೇಗೌಡ ಸಿ)
ಮು. ಮ. ದಂ. ನ್ಯಾ ಬೆಂ. ನಗರ.